ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು

ಪುರುಷರೇಕೆ ಇತ್ತೀಚೆಗೆ ಮೀಸೆ ಬೋಳಿಸಿಕೊಳ್ಳುತ್ತಾರೆ?



ಸಂಸಾರ, ಸರ್ಕಾರಗಳು ಸೇರಿ ಸ್ವಂತವಾಗಿ ಬೋಳಿಸಿಕೊಳ್ಳಲು ಬಿಟ್ಟಿರುವುದು ಅದೊಂದನ್ನೇ ಅಂತೆ.

ಕೌಡ್ಲೆ ರವಿ, ಬೆಂಗಳೂರು

ಅನರ್ಹರ ಬಗ್ಗೆ ಮಾತನಾಡುವ ಅರ್ಹ ರಾಜಕಾರಣಿ ಯಾರಾದರೂ ಇದ್ದಾರಾ?

ದುಸಾಧ್ಯ. ‘ಅರ್ಹ’ ಮತ್ತು ‘ರಾಜಕಾರಣಿ’ ವಿರುದ್ಧ ಪದಗಳು.

ಕುಮಾರ ಚಲವಾದಿ, ಹಾಸನ

ಹಣಕ್ಕಾಗಿ ಲಕ್ಷ್ಮಿ, ವಿದ್ಯೆಗಾಗಿ ಸರಸ್ವತಿ, ಹೀಗೆ ಸ್ತ್ರೀ ದೇವತೆಗಳನ್ನು ಪೂಜಿಸುವ ನಾವು ಹೆಣ್ಣು ಹುಟ್ಟಿದರೆ ಬೇಸರಿಸಿಕೊಳ್ಳುವುದೇಕೆ?

ಮಗಳು ಕಡಲಿನಾಚೆ ಇರುವವನನ್ನೋ, 24/7 ಕೆಲಸ ಮಾಡುವವನನ್ನೋ ಕಟ್ಟಿಕೊಂಡು ಒದ್ದಾಡಬೇಕಲ್ಲಾ ಎಂಬ ಬೇಸರ.

ಎಸ್. ವಿಜಯಕುಮಾರಿ, ಬೆಂಗಳೂರು

ಪ್ರಪಂಚದಲ್ಲಿ ಬರೀ ಸಸ್ಯಾಹಾರಿಗಳೇ ಇರುತ್ತಿದ್ದರೆ ಹೇಗಿರುತ್ತಿತ್ತು ರಾಂಜೀ?



ಕುರಿಕೋಳಿಗಳು ಕಾಲುಕಾಲಿಗೆ ಸಿಕ್ಕಿ ಓಡಾಟ ಕಷ್ಟವಾಗುತ್ತಿತ್ತು.

ಎನ್.ವಿ. ಶ್ರೀನಿವಾಸ್, ಮೈಸೂರು

ರಾಜ ಹರಿಶ್ಚಂದ್ರನ ಕಾಲದಲ್ಲಿ ಗುರುತ್ವಾಕರ್ಷಣ ಶಕ್ತಿ ಇರಲಿಲ್ಲವೆ?

ಇತ್ತು. ಆದರೆ ನ್ಯೂಟನ್ ಇನ್ನೂ ಕಂಡುಹಿಡಿದಿರಲಿಲ್ಲವಾದ್ದರಿಂದ ಹೇಗೆ ನಡೆದುಕೊಳ್ಳಬೇಕೆಂದು ಅದಕ್ಕೆ ತಿಳಿದಿರಲಿಲ್ಲ.

ಶಿವಮೊಗ್ಗ ರಮೇಶ್, ಮೈಸೂರು

ಹಾಳಾಗಿದ್ದನ್ನು ಸರಿಪಡಿಸುವುದು ಗ್ಯಾರೇಜ್; ಸರಿಯಾಗಿದ್ದುದನ್ನು ಹಾಳು ಮಾಡುವುದು ಮ್ಯಾರೇಜ್; ನೀವೇನಂತೀರಿ?

ಹಾಗೇನಿಲ್ಲ. ಲೂಸಾದ ನಟ್ಟನ್ನು ಬಿಗಿಮಾಡಿ ನುಗ್ಗಾದವನ್ನು ಬೆಂಡೆತ್ತುವ ಇಸಮುಗಳು ಮ್ಯಾರೇಜಲ್ಲೂ ಇವೆ.

ವೈದೇಹಿ ಶೇಖರ್, ಮೈಸೂರು

ಇತ್ತೀಚಿನ ಮಕ್ಕಳು ಪೋಷಕರ ಮಾತಿಗಿಂತ ಸ್ನೇಹಿತರ ಮಾತನ್ನೇ ಹೆಚ್ಚು ಕೇಳಲು ಕಾರಣವೇನು?

ಈ ಮಾತನ್ನು ಮೊಟ್ಟ ಮೊದಲು ಪ್ರಹ್ಲಾದನ ಬಗ್ಗೆ ಹಿರಣ್ಯಕಶಿಪು ಹೇಳಿದನಂತೆ.

ರಾಜೀವ ಮಾಗಲ್, ಸಕಲೇಶಪುರ

ಹವಾಮಾನ ಬದಲಾವಣೆಯ ವಿಚಾರದಲ್ಲಿ ಪ್ರತಿಭಟಿಸುವ ಜನ ರಸ್ತೆಗಳಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚುವರಲ್ಲಾ...?

ಆ ಕ್ಷಣದಲ್ಲಿ ಅವರಿಗೆ ಜಗದ ಹವಾಮಾನಕ್ಕಿಂತ ಜಗ್ಗದವರ ‘ಹವಾ’ಮಾನವೇ ಹೆಚ್ಚಾಗಿರುತ್ತದಂತೆ.

ನಾರಾಯಣ ಯಾಜಿ, ಶಿರಾಲಿ

ಕೆಲವು ದೊಡ್ಡವರು ಊಟಕ್ಕೆ ಕರೆದು ಹೊಟ್ಟೆ ತುಂಬ ಬಡಿಸುವುದೇ ಇಲ್ಲ. ಇಂತಹವರಿಗೆ ಏನೆನ್ನಲಿ?

ಮಾತಿಗಿಂತ ಕೃತಿ ಲೇಸು. ಎರಡನೆಯ ಪಂಕ್ತಿಗೂ ಕುಳಿತು ಗಡದ್ದಾಗಿ ಹೊಡೆಯಿರಿ.

ಎಚ್.ಎಂ. ಅನಂತಪದ್ಮನಾಭ, ಮೈಸೂರು

ಬರೆದು ಬದುಕಿದವರು, ಬದುಕಿ ಬರೆದವರು; ಒಂದೊಂದು ಉದಾಹರಣೆ?

ಅ.ನ.ಕೃ.; ಬೆಳಗೆರೆ ಕೃಷ್ಣಶಾಸ್ತ್ರಿ.

ಹರಿತಸ, ಬೆಂಗಳೂರು

ಈಗಿನ ದಂಪತಿಗಳು ಹೆಣ್ಣು ಮಗು ಬೇಡವೆಂದು ಸೊಸೆಯ ಬಯಸುವರು. ಯಾಕೆ?

ಇನ್‌ಸ್ಟೆಂಟ್ ಯುಗವಲ್ಲವೇ! ಇನ್‌ಸ್ಟೆಂಟ್ ಫುಡ್, ಇನ್‌ಸ್ಟೆಂಟ್ ಡ್ರಿಂಕ್‌ನಂತೆ ಸೊಸೆ ಇನ್‌ಸ್ಟೆಂಟ್ ಮಗಳು.

ಡಿ.ಎಲ್. ಚಂದ್ರಿಕಾ, ಬಳ್ಳಾರಿ

ನದಿಗಳಲ್ಲಿ ಪುಣ್ಯಸ್ನಾನದಿಂದ ಪಾಪ ಪರಿಹಾರವೋ, ನದಿಗಳ ಕಲುಷಿತವೋ?

ಮೈಕೊಳೆಯ ಪರಿಹಾರವಷ್ಟೆ. ನದಿ ಕೊಳಕಾಗುವುದು ಮೀಯುವವರಿಂದಲ್ಲ, ಪರಿಸರವನ್ನೇ ಮೇಯುವವರಿಂದ.

## ಬಹುಮಾನಿತ ಪ್ರಶ್ನೆ

ನಾ ಜ್ಯೋತಿ, ಹೂವಿನಹಡಗಲಿ

ಮೋಹನದಾಸ, ಪುರಂದರದಾಸ, ಕನಕದಾಸ, ದೇವದಾಸರಲ್ಲಿ ಪ್ರಸ್ತುತ ಯಾರ ಕುರಿತು ಚಿತ್ರ ನಿರ್ಮಿಸಿದರೆ ಹಣ ಬಾಚಿಕೊಳ್ಳಬಹುದು?

ಇವು ಯಾವುವೂ ಗ್ಯಾರಂಟಿ ಇಲ್ಲ. ಪ್ರೇಮದಾಸ, ಕಾಮದಾಸ, ಕೋಮುದಾಸಗಳನ್ನು ಯತ್ನಿಸಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಕದಿಯಲು ಆಗದ ವಸ್ತು ಯಾವುದು?

ಒಂದಲ್ಲ, ಹಲವಾರು. ಸಾಗಿಸಲು ಆಗದ ಯಾವುದನ್ನೂ ಕದಿಯಲು ಆಗದು.

ಶ್ರೀನಿವಾಸ ಪದಕಿ, ಮುಂಬಯಿ

ನೆಂಟರೆಲ್ಲ ಗಂಟು ಕರಗುವವರೆಗೆ ಮಾತ್ರ ಎನ್ನುವುದು ತಾಯಿಗೂ ಅನ್ವಯಿಸುವುದಾ ಸಾರ್?

ಕೊಂಚವೇ ವ್ಯತ್ಯಾಸ; ಆಕೆ ಕಗ್ಗಂಟು, ಕರುಳಿನ ನಂಟು ಕರಗುವವರೆಗೆ ನಿಮ್ಮೊಡನೆ ಇರುತ್ತಾಳೆ.

ಬಿ. ಚಂದ್ರೇಗೌಡ, ಬೆಂಗಳೂರು

ಗಾಳಿಪಟದಿಂದ ಮನುಷ್ಯ ಏನನ್ನು ಕಲಿಯಬೇಕು?



ಪ್ರಕೃತಿಗೆ ವಿರೋಧವಾಗಿ ಹೋಗದಿದ್ದರೆ ಹಾಯಾಗಿ ಹಾರಾಡ್ಕೊಂಡಿರ್ಬಹುದು ಅನ್ನೋದನ್ನ.

ಎಚ್.ಆರ್. ದೇಸಾಯಿ, ರಾಯಚೂರು

ದ್ರೌಪದಿ, ಸೀತೆಯರಲ್ಲಿ ಜೀವನದಲ್ಲಿ ಗಂಡನಿಂದ ಯಾರು ಹೆಚ್ಚು ಸುಖ ಕಂಡರು?

ನಿಸ್ಸಂಶಯವಾಗಿ ದ್ರೌಪದಿಯೇ. ಸೀತೆಯದು ಯಾವಾಗಲೂ ರಾಮಾಯಣವೇ ಆಯಿತು.

ಜೆ. ಪ್ರದೀಪ್‌ಕುಮಾರ್, ಹೂವಿನಹಡಗಲಿ

ದೊಡ್ಡವರಾದ ಮೇಲೆ ಟ್ರಾಫಿಕ್ ದಂಡ ಕಟ್ಟಿಸುವ ಬದಲು ಶಾಲಾ ಹಂತದಲ್ಲಿಯೇ ಟ್ರಾಫಿಕ್ ರೂಲ್ಸ್ ಹೇಳಿಕೊಡಬಹುದಲ್ಲ?

ಮೊದಲು ಪೋಷಕರು, ಸ್ಕೂಲ್‌ವ್ಯಾನ್ ಚಾಲಕರಿಗೆ ಕಲಿಸಿ. ಮಕ್ಕಳು ಓದಿ ಕಲಿಯುವುದಕ್ಕಿಂತ ನೋಡಿ ಕಲಿಯುವುದೇ ಹೆಚ್ಚು. ■ **ರಾಮ್**